**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.1835/2025**

| | | |
|---|---|---|
| ಸಾಕ್ಷಿದಾರರ ಹೆಸರು | : ಚೇತನ್ ಎಂ. | ಫ್ರಾಸಾ-3 |
| ತಂದೆಯ ಹೆಸರು | : ಮಂಜುನಾಥ | ಚಾಸಾ-3 |
| ವಯಸ್ಸು | : 32 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಕಾರ್ಪೆಂಟರ್ | ದಿನಾಂಕಃ 09.07.2026 |
| ವಾಸಸ್ಥಳ | : ಬಿಳುಗುಳ | |

**:ಮುಖ್ಯ ವಿಚಾರಣೆ: ಫ್ರಾಜ್ಞ್ಯಾಸ.ಸ.ಅ. ರವರಿಂದ:**

1. ನ್ಯಾಯಾಲಯದ ಮುಂದಿರುವ 2 ನೇ ಆರೋಪಿ ಪರಿಚಯ ನನಗಿಲ್ಲ. 1 ನೇ ಆರೋಪಿಯು ಗೈರು ಹಾಜರಿದ್ದು ಅವರ ಗುರುತುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸುತ್ತಾರೆ.

2. ಸಾಕ್ಷಿಯು ನಿಪಿ-2 ರ ಮಹಜರ್ ನಲ್ಲಿ ತಮ್ಮ ಸಹಿಯನ್ನು ಗುರುತಿಸಿ, ನಿಪಿ-3 ರ ಪೋಟೋದಲ್ಲಿ ತಾವು ಇರುವ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಎಂ.ಒ.1 ಮತ್ತು 2ರ ಮೇಲಿನ ತಮ್ಮ ಸಹಿಯನ್ನು ಗುರುತಿಸಿ ಸದರಿ ವಸ್ತು ಹಾಗೂ ಎಂ.ಒ.3 ಮತ್ತು 4 ರ ಬಗ್ಗೆ ತಮಗೆ ಯಾವುದೇ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯ ಸಹಿಯನ್ನು ಎಂ.ಒ.1(ಬಿ) ಮತ್ತು 2(ಬಿ) ಎಂದು ಗುರುತಿಸಲಾಯಿತು.

3. 1 ವರ್ಷದ ಹಿಂದೆ ನಾನು ಮತ್ತು ಚಾಸಾ-2 ರವರು ಬಿಳುಗುಳ ಗ್ರಾಮದ ಕೆ.ಎಂ. ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಮೂಡಿಗೆರೆ ಪೋಲಿಸರು ನಮ್ಮ ಸಹಿಗಳನ್ನು ಪಡೆದು, ಪೋಟೋಗಳನ್ನು ತೆಗೆದಿದ್ದಾರೆ. ಯಾವ ವಿಚಾರಕ್ಕೆ ನಮ್ಮ ಸಹಿಯನ್ನು ಪಡೆದು ಪೋಟೋಗಳನ್ನು ತೆಗೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಾವು ಸಹಿ ಮಾಡುವ ಕಾಲಕ್ಕೆ ಎಂ.ಒ.1 ರಿಂದ 4 ರ ವಸ್ತುವನ್ನು ನೋಡಿಲ್ಲ. ನಿಪಿ-2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಏನನ್ನು ವಶಕ್ಕೆ ಪಡೆದಿಲ್ಲ. ನಾನು ಪೋಲಿಸರ ಮುಂದೆ ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಫ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಫ್ರಾಜ್ಞ್ಯಾಸ.ಸ.ಅ. ರವರಿಂದ:**

1. ಈಗ ಓದಿ ಹೇಳಿದಂತೆ ದಿ.25.05.2025 ರಂದು ಮೂಡಿಗೆರೆ ಪೋಲಿಸರ ಮುಂದೆ ನನ್ನ ಹೇಳಿಕೆ ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿಪಿ-11 ಎಂದು ಗುರುತಿಸಲಾಯಿತು.

2. ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿತರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.